**<u>ದಿನಾಂಕಃ 20–03–2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ವೈ.ಹೆಚ್.ಕೆ. ವಕೀಲರಿಂದಃ</u>**

ದಾವಾ ಆಸ್ತಿಯ ಜೆ - ಅನುಸೂಚಿತ ಆಸ್ತಿ ನಮಗೆ ಹಿಸ್ಸೆ ಇದ್ದು ಅದನ್ನು ಪ್ರತಿವಾದಿ ಸಂಖ್ಯೆ 16 ರಿಂದ 19 ಕಾನೂನು ಬಾಹಿರವಾಗಿ ಖರೀದಿ ಮಾಡಿದ್ದರಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿದ್ದೇವೆ. ಸದರಿರವರ 1984 ರಲ್ಲಿ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ದಾವಾ ಅನುಸೂಚಿತ ಜೆ ಆಸ್ತಿಗಳು ಸರ್ವೆ ನಂ. 35 ಮತ್ತು 36 ಒಟ್ಟು ಕ್ಷೇತ್ರ 12 ಎಕರೆ ದಾವಾ ದಾಖಲು ಮಾಡುವ ಕಾಲಕ್ಕೆ ಆ ರೀತಿ ಇರಲಿಲ್ಲ ಎಂದರೆ ನಿಜ, ಸಾಕ್ಷಿಯು ಖರೀದಿಸುವವರು ಪಾಲು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು 12 ಎಕರೆ ಆಸ್ತಿ ತಮ್ಮ ದತ್ತಕವಾಗಿ ಬಂದಿದ್ದು ಎಂದು ಹೇಳುತ್ತಾರೆ. ಸರ್ವೆ ನಂ. 35 ಮತ್ತು 36 ಖರೀದಿಸಿದವರು ಹಿಸ್ಸೆ ಮಾಡಿಕೊಂಡು ಇರುವ ರೀತಿ ದಾಖಲೆಗಳನ್ನು ಹಾಜರು ಮಾಡಿ ಆ ಪ್ರಕಾರ ದಾವೆ ಸಲ್ಲಿಸಲು ತೊಂದರೆ ಇರುವುದಿಲ್ಲ. 1984 ರಲ್ಲಿ ಸದರಿ ಆಸ್ತಿಗಳನ್ನು ಯಾರು ಎಷ್ಟು ಖರೀದಿಸಿದರು ಎಂದು ದಾವೆಯಲ್ಲಿ ಹೇಳಿರುವುದಿಲ್ಲ. ನನಗೆ ಆಗ ಹೇಳು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಸಿಕ್ಕ ಮಾಹಿತಿ ಪ್ರಕಾರ ದಾವೆ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನೈಜತೆ ಪ್ರಕಾರ ಸರ್ವೆ ನಂ. 35 ಮತ್ತು 36 ದಾವೆ ದಾಖಲು ಮಾಡುವ ಕಾಲಕ್ಕೆ ಆ ರೀತಿ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 04.05.1984 ರಂದು ಸರ್ವೆ ನಂ. 35/1 ರಲ್ಲಿ 03 ಎಕರೆ 07 ಗುಂಟೆಯನ್ನು 16 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ದಿನಾಂಕಃ 04.05.1984 ರಂದು ಸರ್ವೆ ನಂ. 35/1 ರಲ್ಲಿ 03 ಎಕರೆ 07 ಗುಂಟೆಯನ್ನು 19 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ದಿನಾಂಕಃ 04.05.1984 ರಂದು ಸರ್ವೆ ನಂ. 36/1 ರಲ್ಲಿ 02 ಎಕರೆ 33 ಗುಂಟೆಯನ್ನು 18 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನಿಜ. ದಿನಾಂಕಃ 04.05.1984 ರಂದು ಸರ್ವೆ ನಂ. 36/1 ರಲ್ಲಿ 02 ಎಕರೆ 33 ಗುಂಟೆಯನ್ನು 16 ರಿಂದ 19 ನೇ ಪ್ರತಿವಾದಿ ಖರೀದಿ

ಮಾಡಿರುತ್ತಾರೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಯಾಗಿ ದಾಖಲು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಚಂದ್ರಶೇಖರಪ್ಪ ನನಗೆ ಅಜ್ಜ ಆಗಬೇಕು. ಚಂದ್ರಶೇಖರಪ್ಪ ಮತ್ತು ಹೆಂಡತಿ-ಮಕ್ಕಳಿಂದ ಪ್ರತಿವಾದಿ ಸಂಖ್ಯೆ 16 ರಿಂದ 19 ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಬಾರದೆ ಖೊಟ್ಟಿ ರೀತಿಯಲ್ಲಿ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ದಾವಾ ಸರ್ವೆ ನಂ. 35/1 ಮತ್ತು 36/1 ಪೈಕಿ 02 ಎಕರೆ 33 ಗುಂಟೆ, 03 ಎಕರೆ 07 ಗುಂಟೆ, 02 ಎಕರೆ 07 ಗುಂಟೆ ಮತ್ತು 03 ಎಕರೆ 07 ಗುಂಟೆ ಚಂದ್ರಶೇಖರಪ್ಪಗೆ ವಾಟ್ನಿ ಪ್ರಕಾರ ಡ-5133, 1979 ರಲ್ಲಿ ಆಗಿದೆ ಎಂದರೆ ಸರಿಯಲ್ಲ, ಕುಟುಂಬದ ಅನುಮತಿ ಮೇರೆಗೆ ಆಸ್ತಿಗಳನ್ನು ಉಳುಮೆ ಮಾಡಲು ಅವಕಾಶ ಮಾಡಿರುತ್ತಾರೆ. ಅನುಮತಿ ಮೇರೆಗೆ ಆಸ್ತಿಗಳು ಮಾಡಲು ಅನುಮತಿ ಕೊಟ್ಟ ಬಗ್ಗೆ ದಾಖಲಾತಿ ಆಗಿರುವುದಿಲ್ಲ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಸಹ ಹಾಜರು ಮಾಡಿರುವುದಿಲ್ಲ ಎಂದರೆ ನಿಜ. ಪ್ರತಿವಾದಿ ನಂ. 16 ರಿದ 19 ದಾವಾ ಅನುಸೂಚಿತ ಜೆ ಆಸ್ತಿಯನ್ನು ಕಾನೂನಿನ ಪ್ರಕಾರ ಖರೀದಿ ಮಾಡಿದ ಬೊನಾಫೈಡ್ ಪರ್ಚೆಸರ್ ಎಂದರೆ ಸರಿಯಲ್ಲ. ಡ-5133 ಈಗಲೂ ಚಾಲ್ತಿಯಲ್ಲಿದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸದರಿ ಡ ವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಅನಸೂಚಿತ ಜೆ ಆಸ್ತಿ ಪ್ರತಿವಾದಿ ನಂ. 16 ರಿಂದ 19 ಕಾನೂನು ಪ್ರಕಾರ ಖರೀಸಿದ್ದರಿಂದ ಅದರಲ್ಲಿ ನಮಗೆ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ. ಚಂದ್ರಶೇಖರಪ್ಪನವರು ಹಿಸ್ಸೆ ಮುಖಾಂತರ ಆಸ್ತಿಗಳನ್ನು ಪಡೆದು ಕಾನೂನು ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 16 ರಿಂದ 19 ಖರೀದಿ ಮಾಡಿದ ದಿನಾಂಕದಿಂದ ಆಸ್ತಿಗಳನ್ನು ಅನುಭವ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ನಂ. 16 ರಿಂದ 19 ಅವರೆ ವಹಿವಾಟು ಮಾಡುತ್ತಿದ್ದ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ**

ಪ್ರತಿವಾದಿ ನಂ. 6 ರಿಂದ 12 ರ ಪಾಟೀ ಸವಾಲನ್ನು ಅಳವಡಿಕೊಳ್ಳುತ್ತಾರೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.